621

ಕರ್ನಾಟಕ ಸರ್ಕಾರ

ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, , ಉತ್ತರ ವಲಯ-2,

ಗಾಂಧಿನಗರ, ಸಾರ್ವಜನಿಕ ಶಿಕ್ಷಣ ಇಲಾಖೆ ಉತ್ತರ ಜಿಲ್ಲೆ, ಬೆಂಗಳೂರು – 560009

## ನಮೂನೆ-3(ನಿಯಮ-7)

## ಕರ್ನಾಟಕ ಶಿಕ್ಷಣ ಕಾಯಿದೆ ನಿಯಮ 36(6)(ಬಿ) ರಂತೆ ಶಿಕ್ಷಣ ಸಂಸ್ಥೆಗಳ ಮಾನ್ಯತೆ ಪ್ರಮಾಣ ಪತ್ರ

ಸಂಖ್ಯೆ: ಅ4/ಮಾನ್ಯತೆ/108/2013-14 ದಿನಾಂಕ: 13-05-2014

ಶ್ರೀ ಲಕ್ಷ್ಮೀನಾರಾಯಣ ಚಾರಿಟಬಲ್ ಟ್ರಸ್ಟ್ ನಂ 12, ಸ್ವಾನ್ ಚರ್ಚ್ ಕೋರ್ಟ್ 60 ಅಡಿ ರಸ್ತೆ, ಸಂಜಯನಗರ, ಬೆಂಗಳೂರು-94 ಈ ಸಂಸ್ಥೆ ವತಿಯಿಂದ ನಡೆಯುತ್ತಿರುವ ಯಂಗ್ ಸ್ಕಾಲರ್ ಅಕಾಡೆಮಿ ಆಂಗ್ಲ ಹಿರಿಯ ಪ್ರಾಥಮಿಕ ಶಾಲೆ, ವಿಶ್ವನಾಥ ನಾಗೇನಹಳ್ಳಿ, ಆರ್ ಟಿ ನಗರ ಅಂಚೆ, ಬೆಂಗಳೂರು-560032 ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಸದರಿ ಶಾಲೆಗೆ ಖುದ್ದು ಭೇಟಿ ನೀಡಿ ಪರಿಶೀಲಿಸಿದ್ದು, ಸದರಿ ಶಾಲೆಗೆ ಮಾನ್ಯತೆಯನ್ನು ಶಾಶ್ವತ ಅನುದಾನ ರಹಿತವಾಗಿ (Without-Aid) ಈ ಕೆಳಕಂಡ ಷರತ್ತುಗಳನ್ನು ಪೂರೈಸುವ ನಿಬಂಧನೆ ಮೇರೆಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ 36(6)(ಬಿ), ಮಾನ್ಯತೆ ನಿಯಮಗಳು 1999ರ ನಿಯಮಗಳನ್ವಯ ಮಾನ್ಯತೆ ನೀಡಲಾಗಿದೆ.

| ಕ್ರ ಸಂ | ಮಾನ್ಯತೆ ನವೀಕರಿಸಬೇಕಾದ ವರ್ಷ | ಮಾನ್ಯತೆ ನವೀಕರಿಸಬೇಕಾದ ತರಗತಿ ಮತ್ತು ವಿಭಾಗಗಳು ಆಂಗ್ಲ ಮಾಧ್ಯಮ |
|---|---|---|
| 01 | 2014-15 ರಿಂದ 2018-19 ರವರೆಗೆ ಶಾಶ್ವತ ಅನುದಾನ ರಹಿತವಾಗಿ (Without-Aid) | 6 ರಿಂದ 7ನೇ ತರಗತಿಗೆ ಆಂಗ್ಲ ಮಾಧ್ಯಮದಲ್ಲಿ ತಲಾ ಒಂದೊಂದು ವಿಭಾಗದಂತೆ 2 ವಿಭಾಗಗಳಿಗೆ |

ಷರತ್ತುಗಳು:

- ಕರ್ನಾಟಕ ಶಿಕ್ಷಣ ಕಾಯ್ದೆ 1983 ಕರ್ನಾಟಕ ಆಕ್ಟ್ 1 ಆಫ್ 1995 ರ ನಿಯಮಗಳು ಹಾಗೂ ಸರ್ಕಾರಿ ಮತ್ತು ಇಲಾಖೆಯಿಂದ ಕಾಲಕಾಲಕ್ಕೆ ನೀಡುವ ಸುತ್ತೋಲೆ ಹಾಗೂ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.
- ಕರ್ನಾಟಕ ಶಿಕ್ಷಣ ಸಂಸ್ಥೆಗಳು, ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತು ನಿಗಧೀಕರಣ ನಿಯಮಾವಳಿಗಳು 1995 ರ ಸರ್ಕಾರಿ ಅಧಿಸೂಚನೆ ಸಂಖ್ಯೆ: 116 ವಿವಿಧ 95 ದಿನಾಂಕ: 14-11-95 ರ ನಿಯಮ 4, 5, 6 ಮತ್ತು 8 ರನ್ವಯ ಶಾಲಾ ಸುರಕ್ಷತೆ ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದಿರತಕ್ಕದ್ದು.
- ಕರ್ನಾಟಕ ಶಿಕ್ಷಣ ಕಾಯ್ದೆ 1983 ಕರ್ನಾಟಕ ಆಕ್ಟ್ 1 ಆಫ್ 1995 ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು, ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತು ನಿಗಧೀಕರಣ ನಿಯಮಾವಳಿಗಳು 1995 ರ ಸರ್ಕಾರಿ ಅಧಿಸೂಚನೆ ಸಂಖ್ಯೆ ಇಡಿ 116 ವಿವಿಧ 95 ದಿನಾಂಕ: 14-11-95 ರ ನಿಯಮ 10 ರಂತೆ ಟರ್ಮ ಶುಲ್ಕ, ಬೋಧನಾ ಶುಲ್ಕ, ವಿಶೇಷ ಅಭಿವೃದ್ಧಿ ಶುಲ್ಕಗಳನ್ನು ಮಾತ್ರ ವಸೂಲಿ ಮಾಡುವುದು. ಹಾಗೂ ನಿಯಮ 19(4) ರಂತೆ ಕ್ರಮ ವಹಿಸುವುದು.
- ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ 41 (5) ರಂತೆ ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ನಡೆಸತಕ್ಕದ್ದು, ಅನುಮತಿ ನೀಡಿದ 5 ವರ್ಷಗಳವರೆಗೆ ಶಾಲಾ ಸ್ಥಳಾಂತರ ಮತ್ತು ಹಸ್ತಾಂತರಕ್ಕೆ ಅವಕಾಶವಿರುವುದಿಲ್ಲ. ಒಂದು ವೇಳೆ ಈ ಅವಧಿಯ ನಂತರ ಸ್ಥಳಾಂತರ/ಹಸ್ತಾಂತರ ಮಾಡಿಸಲಿಚ್ಛಿಸಿದಲ್ಲಿ ಹೊಸ ಸ್ಥಳದಲ್ಲಿ ಹೊಸದಾಗಿ ಹೊಂದಣಿ ಮಾನ್ಯತೆಯನ್ನು ಪಡೆಯತಕ್ಕದ್ದು.
- ಕರ್ನಾಟಕ ರಾಜ್ಯದ ಸಂಘದ ನೊಂದಣಿ ಕಾಯ್ದೆ 21 1960 ಕ್ರಮ ಸಂಖ್ಯೆ 9 1957 ಅಧಿನಿಯಮ 13 ರ ಪ್ರಕರಣದಂತೆ ಹಿಂದಿನ ಸಾಲಿನವರೆಗಿನ ಲೆಕ್ಕ ಪತ್ರಗಳನ್ನು (31-03-2011) ರವರೆಗೆ ಸಂಘಗಳ ನೊಂದಣಾಧಿಕಾರಿಗಳಿಗೆ ಸಲ್ಲಿಸಿ ದಾಸ್ತಾವೇಜುಗಳನ್ನು ದಾಖಲು ಪಡಿಸುವುದು. ಹಾಗೂ ಸದರಿ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿಯ ದಾಖಲೆಗಳನ್ನು ಅನುಮೋದಿಸಿಕೊಂಡು ಸ್ವೀಕೃತಿ ಹಾಗೂ ಅನುಮೋದನಾ ಪಟ್ಟಿಯನ್ನು 30 ದಿನಗಳ ಒಳಗಾಗಿ ಈ ಕಛೇರಿಗೆ ಮುದ್ದಾಂ ಸಲ್ಲಿಸುವುದು.
- ಕರ್ನಾಟಕ ಶಿಕ್ಷಣ ಕಾಯ್ದೆ 1983 ಸರ್ಕಾರದ ಅಧಿಸೂಚನೆ ಇಡಿ 131 ವಿವಿಧ 98 ದಿನಾಂಕ: 04-11-99 ರ ಮಾನ್ಯತೆ ನಿಯಮ 1999 ರ ನಿಯಮ 3 ಉಪನಿಯಮ 2 ರಂತೆ ಹಾಗೂ ನಿರ್ದೇಶಕರು ಪ್ರಾಥಶಿಕ್ಷಣ ರವರ ಸುತ್ತೋಲೆ ಸಂಖ್ಯೆ:

CHAIRMAN
YOUNG SCHOLARS ACADEMY
Viswanatha Nagenahalli
R.T. Nagar Post, Bangalore - 560 032

Principal
Young Scholars Academy
(Affiliated to CBSE)
Site No. 1, Sy. No. 26/3, (RKB Estate)
V. Nagenahalli (Near Church), R.T. Nagar P.
Bangalore - 560 032

ಸ8(4)(7) ಶಾಶಿಇ ನಿ ಅ 01/02-03 ದಿನಾಂಕ: 13-12-02 ರ ನಿಯಮಗಳಂತೆ ಸ್ಥಿರನಿಧಿ ಠೇವಣಿಗಳನ್ನು ನಿಗಧಿಪಡಿಸಿರುವ ದರಗಳಲ್ಲಿ ನಿರ್ವಹಿಸುವುದು ಹಾಗೂ ಕಾಲಕಾಲಕ್ಕೆ ನವೀಕರಣ ಮಾಡಿಸುವುದು

- ಸರ್ಕಾರದ ಆದೇಶ ಸಂಖ್ಯೆ: ಇಡಿ 44 ಎಸ್ ಎಲ್ ಬಿ 2007 ದಿನಾಂಕ: 03-09-2007 ರ ಅನುಬಂಧ 3 ರಲ್ಲಿನ ಚೆಕ್‌ಲಿಸ್ಟ್ ನಂತೆ ಎಲ್ಲಾ ಮಾಹಿತಿ ದಾಖಲೆಗಳನ್ನು ಹೊಂದಿರತಕ್ಕದ್ದು ಹಾಗೂ ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
- ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 74 ವಿವಿಧ 2004 ಬೆಂಗಳೂರು ದಿನಾಂಕ: 14-08-2006 ರ ಸೂಚನೆಗಳಂತೆ ಲೆಕ್ಕ ಪತ್ರಗಳು, ದಾಖಲೆಗಳನ್ನು ನಿರ್ವಹಿಸುವುದು.
- ಕರ್ನಾಟಕ ಶಿಕ್ಷಣ ಸಂಸ್ಥೆಗಳು ಮಾನ್ಯತೇ ನಿಯಮಗಳು 1999 ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 131 ವಿವಿಧ 98 ದಿನಾಂಕ: 04-11-99 ರ ನಿಯಮ 4 (8) ರಂತೆ ಕಿರಿಯ ಪ್ರಾಥಮಿಕ ಶಾಲೆಗಳಿಗೆ 50 ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಿಗೆ 100 ವಿದ್ಯಾರ್ಥಿಗಳ ಕನಿಷ್ಠ ದಾಖಲಾತಿಯನ್ನು ನಿರ್ವಹಿಸಿರುವುದು.
- ನೇಮಕಾತಿಗಳನ್ನು ಸರ್ಕಾರಿ/ಇಲಾಖಾ ನಿಯಮ ಮತ್ತು ಆದೇಶಗಳ ಪ್ರಕಾರ ಮಾಡುವುದು.
- ಇಲಾಖೆಯ ಪೂರ್ವಾನುಮತಿ ಪಡೆಯದೆ ಹೆಚ್ಚಿನ ತರಗತಿ ವಿಭಾಗಗಳನ್ನು ತೆರೆಯಬಾರದು.
- ಇಲಾಖಾ ನಿಯಮಾನುಸಾರ ನಿಗಧಿತ ಹಾಗೂ ಅರ್ಹ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ಹೊಂದಿದ್ದಲ್ಲಿ ಮಾತ್ರ ಮಾನ್ಯತೆ ಅನ್ವಯಿಸಲಿದ್ದು ನಿಯಮ ಉಲ್ಲಂಘನೆಯಾದಲ್ಲಿ ಮಾನ್ಯತೆ ತಂತಾನೆ ರದ್ದಾಗುತ್ತದೆ.
- ಶಿಕ್ಷಕರ ಸೇವಾ ವಿವರಗಳನೊಳಗೊಂಡ ಸೇವಾ ಪಟಗಳನ್ನು ತೆರೆದು ಕಾಲಕಾಲಕ್ಕೆ ನಮೂದನೆಗಳನ್ನು ನಮೂದಿಸಿ ದೃಢೀಕರಿಸತಕ್ಕದ್ದು.
- ಶಿಕ್ಷಕರಿಗೆ ಸರ್ಕಾರಿ ಆದೇಶಗಳಂತೆ ವೇತನಗಳನ್ನು ಬ್ಯಾಂಕ್ ಉಳಿತಾಯ ಖಾತೆಗಳ ಮೂಲಕ ಪಾವತಿ ಮಾಡತಕ್ಕದ್ದು, ಯಾವುದೇ ಕಾರಣಕ್ಕೆ ನಗ್ದು ನೀಡತಕ್ಕದಲ್ಲ.
- ಈ ಶಾಲೆ ಪ್ರಾರಂಭವಾದಾಗಿನಿಂದ ಸಂಸ್ಥೆ ಹಸ್ತಾಂತರ ಹಾಗೂ ಶಾಲೆ ಸ್ಥಳಾಂತರವಾಗಿದ್ದಲ್ಲಿ ಶಿಕ್ಷಣ ಕಾಯ್ದೆಯನುಸಾರ ಸದರಿ ಶಾಲೆಗೆ ಹೊಸದಾಗಿ ನೊಂದಣಿ ಪ್ರಥಮ ಮಾನ್ಯತೇ ಹಾಗೂ ಕಾಲಕಾಲಕ್ಕೆ ಮಾನ್ಯತೆಗಳನ್ನು ಪಡೆದಿದ್ದಲ್ಲಿ ಮಾತ್ರ ಈ ಆದೇಶ ಚಾಲ್ತಿಯಾಗುವುದು. ಈ ಸಂಬಂಧ ಯಾವುದೇ ನಿಯಮೋಲ್ಲಂಘನೆಯಾಗಿದ್ದರೂ ಈ ಮಾನ್ಯತೇ ಆದೇಶ ತಂತಾನೆ ರದ್ದಾಗುತ್ತದೆ.
- ಶಿಕ್ಷಣ ಕಾಯ್ದೆ 1983 ನಿಯಮಗಳಲ್ಲಿ ನಿಗಧಿಪಡಿಸಿರುವ ದಾಖಲಾತಿ/ಹಾಜರಾತಿಯನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.

16/2/10

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಉತ್ತರ ವಲಯ-02

ರವರಿಗೆ:

1. ಗೌರವಪೂರ್ವಕವಾಗಿ, ಉಪನಿರ್ದೇಶಕರು, ಸಾ.ಶಿ.ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ ಬೆಂಗಳೂರು ರವರ ಅವಗಾಹನೆಗೆ
2. ಕಾರ್ಯದರ್ಶಿಗಳು/ಮುಖ್ಯ ಶಿಕ್ಷಕರು, ಯಂಗ್ ಸ್ಕಾಲರ್ ಅಕಾಡೆಮಿ ಆಂಗ್ಲ ಹಿರಿಯ ಪ್ರಾಥಮಿಕ ಶಾಲೆ, ವಿಶ್ವನಾಥ ನಾಗೇನಹಳ್ಳಿ, ಆರ್ ಟಿ ನಗರ ಅಂಚೆ, ಬೆಂಗಳೂರು-560032
3. ಕಛೇರಿ ಪ್ರತಿ.

CHAIRMAN
YOUNG SCHOLARS ACADEMY
Viswanatha Nagenahalli
R.T. Nagar Post, Bangalore - 560 032

Principal
Young Scholars Academy
(Affiliated to CBSE)
Site No. 1, Sy. No. 26/3, (RKB Est.
V. Nagenahalli (Near Church), R.T. Nagar
Bangalore - 560 032

64 9

original.

### ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಛೇರಿ,
### ಬೆಂಗಳೂರು ಉತ್ತರ ಜಿಲ್ಲೆ, ಕೆ.ಜಿ.ರಸ್ತೆ, ಬೆಂಗಳೂರು-2
### ನಮೂನೆ-3 (ನಿಯಮ-7)
### ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳ ತಾತ್ಕಾಲಿಕ ಮಾನ್ಯತೆ ಪ್ರಮಾಣ ಪತ್ರ

ಸಂಖ್ಯೆ:ಅನು5(2487)ಮಾನ್ಯತೆ.6/2014-15 ದಿನಾಂಕ:4/7/2014

ಲಕ್ಷ್ಮೀನಾರಾಯಣ ಚಾರಿಟೇಬಲ್ ಟ್ರಸ್ಟ್ (ರಿ) ನಂ.12, ಸ್ಟ್ಯಾನ್‌ಬೆರ್ರಿ ಕೋರ್ಟ್, 60 ಅಡಿರಸ್ತೆ, ಸಂಜಯನಗರ ಬೆಂಗಳೂರು-94 ಈ ಆಡಳಿತ ಮಂಡಳಿಯ ವತಿಯಿಂದ ನಡೆಯುತ್ತಿರುವ ಯಂಗ್ ಸ್ಕಾಲರ್ಸ್ ಅಕಾಡೆಮಿ ಪ್ರೌಢಶಾಲೆ ವಿಶ್ವನಾಥ ನಾಗೇನಹಳ್ಳಿ ಕಸಬಾಹೋಬಳಿ ಆರ್.ಟಿ.ನಗರ ಅಂಚೆ ಬೆಂಗಳೂರು-32 ಈ ಶಾಲೆಗೆ ಮಾನ್ಯತೆಯನ್ನು ಶಾಶ್ವತ ಅನುದಾನ ರಹಿತವಾಗಿ (PERMANENTLY WITHOUT AID) ಈ ಕೆಳಕಂಡ ಷರತ್ತುಗಳನ್ನು ಪೂರೈಸುವ ನಿಬಂಧನೆ ಮೇರೆಗೆ, ತಾತ್ಕಾಲಿಕವಾಗಿ ಕರ್ನಾಟಕ ಶಿಕ್ಷಣ ಸಂಹಿತೆ ನಿಯಮ-36(6)(ಬಿ) ಯಂತೆ ನೀಡಿದೆ.

| ಕ್ರ. ಸಂ | ಮಾನ್ಯತೆ ನವೀಕರಿಸಬೇಕಾದ ವರ್ಷ | ಮಾನ್ಯತೆ ನವೀಕರಿಸಬೇಕಾದ ವಿಭಾಗಗಳು (ಮಾಧ್ಯಮ) | ಶಾಲೆಯು ಯಾವ ವರ್ಗಕ್ಕೆ ಸೇರಿದೆ | ಶಾಲೆಯ ಮಾನ್ಯತೆ ನವೀಕರಿಸುವ ಬಗ್ಗೆ ಸ್ಥಳಪರಿಶೀಲನೆ ನಡೆಸಿದ ಅಧಿಕಾರಿಯವರ ಹೆಸರು |
|---|---|---|---|---|
| 1 | 2014-15 ನೇ ಸಾಲಿನಿಂದ 2018-19 ರ ವರೆಗೆ ಐದು ವರ್ಷಗಳಿಗೆ ಮಾತ್ರ ಶಾಶ್ವತ ಅನುದಾನ ರಹಿತವಾಗಿ (PERMANENTLY WITHOUT AID) ಮಾನ್ಯತೆ ನವೀಕರಿಸಿದೆ | 8ನೇ ತರಗತಿ -1 ವಿಭಾಗ<br>9ನೇ ತರಗತಿ -1 ವಿಭಾಗ<br>10ನೇತರಗತಿ -1 ವಿಭಾಗ<br>ಒಟ್ಟು 03 ವಿಭಾಗಗಳು<br>ಆಂಗ್ಲ ಮಾಧ್ಯಮ | ಸಾಮಾನ್ಯ ವರ್ಗ | ಶ್ರೀ.ಕೆ.ಜಿ.ಆಂಜಿನಪ್ಪ, ಕ್ಷೇತ್ರಶಿಕ್ಷಣಾಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ ಉತ್ತರ ವಲಯ-2 18ನೇ ಅಡ್ಡರಸ್ತೆ, ಮಲ್ಲೇಶ್ವರಂ ಬೆಂಗಳೂರು |

<u>ಷರತ್ತುಗಳು:-</u>

1. ಕರ್ನಾಟಕ ಶಿಕ್ಷಣ ಸಂಹಿತೆ ಮತ್ತು ಅನುದಾನ ಸಂಹಿತೆಯ ಎಲ್ಲಾ ನಿಯಮಗಳನ್ನು ಸರ್ಕಾರದ ಹಾಗೂ ಇಲಾಖೆಯ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
2. ನೇಮಕಾತಿಗಳನ್ನು ಸರ್ಕಾರಿ ಆದೇಶ ಸಂಖ್ಯೆ:ಇಡಿ.59.ವಿವಿಧ.99,ದಿನಾಂಕ:2/2/2000 ರಂತೆ ಮಾಡಬೇಕಾಗುವುದು. ಶಾಲೆಯ ಸಿಬ್ಬಂದಿ ರಚನೆಯು ಮೇಲ್ಕಂಡ ಸರ್ಕಾರಿ ಆದೇಶದನ್ವಯ ಇರಬೇಕು. ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ನಿಗದಿತ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ಮಾತ್ರ ನೇಮಿಸಿಕೊಳ್ಳತಕ್ಕದ್ದು.
3. ಶಾಲೆಯಲ್ಲಿ ನೇಮಕಮಾಡಿಕೊಳ್ಳುವ ಪ್ರತಿಯೊಬ್ಬ ಬೋಧಕ/ಬೋಧಕೇತರ ಸಿಬ್ಬಂದಿಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ.104 ಎಸ್.ಇ.ಪಿ.2005 ದಿ:12-1-2006 ರ ಸೂಚನೆಗಳ ಪ್ರಕಾರ ಸೇವಾಪುಸ್ತಕಗಳನ್ನು ತೆರೆದು ಅದರಲ್ಲಿ ಸೇವಾವಿವರಗಳನ್ನು ನಿಯಮಾನುಸಾರ ದಾಖಲಿಸಿ ನಿರ್ವಹಿಸುವುದು.
4. ಶಾಲೆ ನಡೆಸಲು ಅಗತ್ಯವಾದ ಸ್ಥಳಾವಕಾಶ, ಪೀಠೋಪಕರಣ, ಪಾಠೋಪಕರಣ ಹಾಗೂ ಆಟದ ಮೈದಾನ ಕನಿಷ್ಠ ಮೂಲಭೂತ ಸೌಕರ್ಯ ಒದಗಿಸಬೇಕು.
5. ಶಾಲೆಯಲ್ಲಿ ಸರ್ಕಾರಿ ಆದೇಶದ ಸಂಖ್ಯೆ:ಇಡಿ.59.ವಿವಿಧ.99 ದಿನಾಂಕ:2/2/2000 ರ ಅನುಚ್ಛೇದ-4, ನಿಯಮ-3 ರಂತೆ ವಿದ್ಯಾರ್ಥಿಗಳ ದಾಖಲಾತಿ, ಹಾಜರಾತಿ ಇರತಕ್ಕದ್ದು.
6. ಇಲಾಖಾ ನಿಯಮದಂತೆ ಮಾತ್ರ ನಿಗದಿತ ಶುಲ್ಕ ವಸೂಲಿ ಮಾಡುವುದು ಮತ್ತು ಇದರ ಲೆಕ್ಕಪತ್ರಗಳನ್ನು ನಿರ್ವಹಿಸಿ, ಶಾಲೆಯ ಹೆಸರಿನಲ್ಲಿಟ್ಟು ಶಾಲಾ ತನಿಖಾ ಸಮಯದಲ್ಲಿ ಹಾಜರುಪಡಿಸುವುದು. ಹಿಂದಿನ ಸಾಲಿನವರೆಗಿನ ಲೆಕ್ಕಪತ್ರಗಳನ್ನು ನೋಂದಣಾಧಿಕಾರಿಗಳಿಗೆ ಸಲ್ಲಿಸಿ ಸ್ವೀಕೃತಿ ಪ್ರತಿ ಸಲ್ಲಿಸಬೇಕು.
7. ಕರ್ನಾಟಕ ಶಿಕ್ಷಣ ಸಂಹಿತೆ ನಿಯಮಗಳಂತೆ, ಸ್ಥಿರ ನಿಧಿ ಇಡಬೇಕು.
8. ಇಲಾಖೆಯು ನಿರ್ಧರಿಸಿರುವ ಪಠ್ಯಪುಸ್ತಕವನ್ನೇ ಬೋಧಿಸಬೇಕು. ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಭಾಷಾ ನೀತಿ ಅನುಸರಿಸಬೇಕು. ಇಲಾಖೆಯ ಪೂರ್ವಾನುಮತಿ ಪಡೆಯದೇ ಹೆಚ್ಚಿನ ತರಗತಿ/ವಿಭಾಗಗಳನ್ನು ತೆರೆಯಬಾರದು.
9. ಶಾಲೆಯ ಮೇಲಿನ ಅಂತಸ್ತುಗಳಿಗೆ ಹೋಗಬೇಕಾದ ಮೆಟ್ಟಿಲುಗಳು ಕಿರಿದು ಆಗಿರಬಾರದು. ಒಂದು ವೇಳೆ ಪ್ರತಿ ಮಹಡಿಗಳಲ್ಲಿ ಸುರಕ್ಷಿತ ಗೋಡೆಗಳನ್ನು ನಿರ್ಮಿಸದಿದ್ದಲ್ಲಿ, ಅಥವಾ ತುಂಬಾ ಚಿಕ್ಕದಾದ ಗೋಡೆಗಳನ್ನು ನಿರ್ಮಾಣ ಮಾಡಿದ್ದಲ್ಲಿ ಈ ಬಗ್ಗೆ ಜಾಗರೂಕತಾ ಕ್ರಮ ಕೈಗೊಳ್ಳಬೇಕು. ಕೊನೆಯ ಪು

Principal
Young Scholars Academ
(Affiliated to CBSE)
Site No. 1, Sy. No. 20/3, (RKB Esh...
V. Nagenahalli (Near Church), R.T. Na...
Bangalore - 560 032

CHAIRMAN
YOUNG SCHOLARS ACADEMY
Viswanatha Nagenahalli
R.T. Nagar Post, Bangalore - 560 037

5 ಅಡಿ ಪಡ ಗೋಡೆಗಳು ಇರುವಂತೆ ನೋಡಿಕೊಳ್ಳಬೇಕು. ಗಾಳಿ ಬೆಳಕಿನ ವ್ಯವಸ್ಥೆಗೆ ಅಡ್ಡಿ ಉಂಟಾಗದಂತೆ ಗ್ರಿಲ್‌ಗಳನ್ನು ಅಳವಡಿಸಬೇಕು.

10. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ, ಕ್ರಮಬದ್ಧಗೊಳಿಸುವಿಕೆ ಮತ್ತು ಪಠ್ಯಕ್ರಮದ ನಿಗಧಿಗೊಳಿಸುವಿಕೆ ಇತ್ಯಾದಿ) ನಿಯಮಗಳು-1995 ರಲ್ಲಿ ತಿಳಿಸಿರುವಂತೆ ಮಕ್ಕಳ ಸುರಕ್ಷತೆಬಗ್ಗೆ ಎಲ್ಲಾ ಅಗತ್ಯ ಕ್ರಮಗಳನ್ನು ಹಾಗೂ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದು.

11. ಪ್ರಾರ್ಥನೆ ಆದ ಮೇಲೆ ತರಗತಿಗೆ ಮಕ್ಕಳನ್ನು ಕಳುಹಿಸುವಾಗ ಹಾಗೂ ಮೇಲಿನ ಅಂತಸ್ತಿಗೆ ಹೋಗುವಾಗ ನೂಕುನುಗ್ಗಲು ಇರಬಾರದು. ಶಾಲೆ ಬಿಟ್ಟಾಗ ಮತ್ತು ಕೊನೆಯ ಬೆಲ್ ಆದ ಮೇಲೂ ಸಹ ಮಕ್ಕಳ ಸುರಕ್ಷತೆಬಗ್ಗೆ ಕ್ರಮವಹಿಸುವುದು. ಶಾಲೆಯ ಸೆಕ್ಯೂರಿಟಿ ಗಾರ್ಡ್‌ಗಳನ್ನು ಈ ಕೆಲಸಕ್ಕೆ ನಿಯೋಜಿಸಿಕೊಳ್ಳಬೇಕು.

12. ಯಾವುದೇ ಸಂದರ್ಭದಲ್ಲೂ ಶಾಲೆಯ ಮಕ್ಕಳು ಶಾಲೆ ಮುಗಿದ ಮೇಲೆ ರಸ್ತೆಗಳನ್ನು ದಾಟುವ ಸಂದರ್ಭಗಳು ಇದ್ದಲ್ಲಿ ದಾಟಿಸಲು ಶಿಕ್ಷಕರಾಗಲೀ ಅಥವಾ ಆಡಳಿತ ಮಂಡಳಿಗಳ ಸೆಕ್ಯೂರಿಟಿಯಾಗಲೀ ಕಡ್ಡಾಯವಾಗಿ ಹಾಜರಿದ್ದು, ಮಕ್ಕಳನ್ನು ದಾಟಿಸಲು ವ್ಯವಸ್ಥೆ ಮಾಡಬೇಕು.

13. ಶಾಲೆಯಲ್ಲಿ ಮಕ್ಕಳನ್ನು ಕರೆತರುವ ವಾಹನಗಳು ಇದ್ದಲ್ಲಿ ಸಾರಿಗೆ ನಿಯಮಗಳನ್ನು ಮೀರಿ ನಿಗಧಿತ ಸಂಖ್ಯೆಗಿಂತ ಹೆಚ್ಚಿನ ಮಕ್ಕಳನ್ನು ತುಂಬಿಕೊಂಡು ಬರುವುದನ್ನು ನಿಷೇದಿಸಬೇಕು. ಒಂದು ವೇಳೆ ಆಡಳಿತ ಮಂಡಳಿಯಲ್ಲಿ ಸಾರಿಗೆ ವ್ಯವಸ್ಥೆಯ ಮೇಲೆ ನಿಯಂತ್ರಣ ಇಲ್ಲದಿದ್ದಲ್ಲಿ ನಿಷಿದ್ಧ ಪ್ರಕರಣಗಳ ಬಗ್ಗೆ ಪೋಲಿಸ್ ಇಲಾಖೆಗೆ ದೂರು ನೀಡಬೇಕು. ಇತ್ತೀಚಿನ ಮಾನ್ಯ ಆಯುಕ್ತರ ಸುತ್ತೋಲೆಯಲ್ಲಿನ ಷರತ್ತುಗಳನ್ನು ಪಾಲಿಸುವುದು.

14. ಮಧ್ಯಂತರ ಅವಧಿಯಲ್ಲಿ ಅಥವಾ ಅನಿರೀಕ್ಷಿತ ಕಾರಣಗಳಿಗಾಗಿ ಶಾಲೆ ಬಿಡುವ ಸಂದರ್ಭಗಳಲ್ಲಿ ಮಕ್ಕಳ ಚಲನವಲನಗಳ ಮೇಲೆ ನಿಗಾ ಇಡುವಲ್ಲಿ ಕ್ರಮಕೈಗೊಳ್ಳಬೇಕು. ಮಕ್ಕಳು ಆಟ ಆಡುವಾಗ ಕಡ್ಡಾಯವಾಗಿ ಉಸ್ತುವಾರಿ ಮಾಡುವ ವ್ಯವಸ್ಥೆ ಶಾಲೆಯಲ್ಲಿ ಇರಬೇಕು.

15. ಶಾಲಾ ಮಕ್ಕಳಿಗೆ ಯಾವುದೇ ದೈಹಿಕ ದಂಡನೆಗಳನ್ನು ನೀಡಬಾರದು.

16. ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು ಮತ್ತು ಸಿಬ್ಬಂದಿಯವರಿಗೆ ದಿನಾಂಕ:12-1-2006 ರ ಸರ್ಕಾರದ ಆದೇಶದಂತೆ ಸೇವಾಭದ್ರತೆ ಒದಗಿಸಬೇಕು ಮತ್ತು ಬ್ಯಾಂಕ್ ಮೂಲಕ ವೇತನ ಪಾವತಿಸಬೇಕು.

17. ಕಡ್ಡಾಯವಾಗಿ ಅಗ್ನಿನಂದಕ ಅಳವಡಿಸುವುದು.

18. ಶಾಲೆಯ 200 ಮೀಟರ್ ಸುತ್ತಳತೆಯಲ್ಲಿ ಧೂಮಪಾನ ನಿಷೇಧ ಪ್ರಕಟಣಾಫಲಕವನ್ನು ಕಡ್ಡಾಯವಾಗಿ ಹಾಕಬೇಕು.

19. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಶಾಲೆಯ ದಾಖಲಾತಿ-ಹಾಜರಾತಿಯನ್ನು ಕನಿಷ್ಠ ನಿಗಧಿತ ಪ್ರಮಾಣಕ್ಕೆ ಹೆಚ್ಚಿಸಿಕೊಳ್ಳದೇ ಇದ್ದಲ್ಲಿ ಶಾಲೆಯ ಮಾನ್ಯತೆಯನ್ನು ಹಿಂದಕ್ಕೆ ಪಡೆಯಲು ಕ್ರಮವಹಿಸಲಾಗುವುದು.

(ಹೆಚ್.ಬಿ.ಮಂಜುನಾಥ್)
ಉಪನಿರ್ದೇಶಕರು(ಆಡಳಿತ)

<u>ಪ್ರತಿಗಳು:-</u>

1) ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಉತ್ತರ ವಲಯ-2 18ನೇ ಅಡ್ಡರಸ್ತೆ ಮಲ್ಲೇಶ್ವರಂ ಬೆಂಗಳೂರು.
2) ಕಾರ್ಯದರ್ಶಿಗಳು ಲಕ್ಷ್ಮೀನಾರಾಯಣ ಚಾರಿಟೇಬಲ್ ಟ್ರಸ್ಟ್ (ರಿ) ನಂ.12, ಸ್ವಾನ್ ಚೆರ್ರಿ ಕೋರ್ಟ್, 60 ಅಡಿರಸ್ತೆ ಸಂಜಯನಗರ ಬೆಂಗಳೂರು-94
3) ಮುಖ್ಯಶಿಕ್ಷಕರು ಯಂಗ್ ಸ್ಕಾಲರ್ಸ್ ಅಕಾಡೆಮಿ ಪ್ರೌಢಶಾಲೆ ವಿಶ್ವನಾಥ ನಾಗೇನಹಳ್ಳಿ ಕನಕಪುರ ಹೋಬಳಿ ಆರ್.ಟಿ.ನಗರ ಅಂಚೆ ಬೆಂಗಳೂರು-32
4) ಕಛೇರಿ ಪ್ರತಿ.

CHAIRMAN
YOUNG SCHOLARS ACADEMY
Viswanatha Nagenahalli
R.T. Nagar Post, Bangalore - 560 032

Principal
Young Scholars Academy
(Affiliated to CBSE)
Site No. 1, Sy. No. 28/3, (RKB Estate)
Nagenahalli (Near Church), R.T. Nagar Post
Bangalore - 560 032

ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ಉತ್ತರ ವಲಯ-02, 4 ನೇ ಅಡ್ಡರಸ್ತೆ, ೯ನೇ ಮುಖ್ಯ ರಸ್ತೆ

ಗಾಂಧಿನಗರ, ಬೆಂಗಳೂರು-09

ನಮೂನೆ-3 (ನಿಯಮ-7)

## ಕಡ್ಡಾಯ ಶಿಕ್ಷಣ ಕಾಯಿದೆ ಜಾರಿಗೆ ಬರುವ ಅಸ್ತಿತ್ವದಲ್ಲಿದ್ದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳ ತಾತ್ಕಾಲಿಕ ಮಾನ್ಯತೆ ಪ್ರಮಾಣ ಪತ್ರ

ದಿನಾಂಕ: 13-01-11

ಸಂಖ್ಯೆ: ಪ್ರ ಮಾ ನ ಆ 40/10-11

ಲಕ್ಷ್ಮೀನಾರಾಯಣ ಚಾರಿಟಬಲ್ ಟ್ರಸ್ಟ್ (ರಿ) # 12, ಬ್ಲ್ಯೂ ಬೆರಿ ಲೇಔಟ್, 80 ಅಡಿ ರಸ್ತೆ, ಸಂಜಯನಗರ, ಬೆಂಗಳೂರು-94 ಈ ಸಂಸ್ಥೆ ವತಿಯಿಂದ ನಡೆಸುತ್ತಿರುವ ಯಂಗ್ ಸ್ಕಾಲರ್ ಅಕಾಡೆಮಿ ಹಿರಿಯ ಪ್ರಾಥಮಿಕ ಶಾಲೆ ಈ ಶಾಲೆಗೆ ಮಾನ್ಯತೆಯನ್ನು ಅನುದಾನ ರಹಿತವಾಗಿ ಈ ಕೆಳಕಂಡ ಷರತ್ತುಗಳನ್ನು ಶಿಕ್ಷಣಾಧಿಕಾರಿಗಳವರು, ಬೆಂಗಳೂರು [illegible] ಮೇರೆಗೆ ತಾತ್ಕಾಲಿಕವಾಗಿ ಕರ್ನಾಟಕ ಶಿಕ್ಷಣ ಸಂಹಿತೆ ನಿಯಮ 38 (ಎ) ರ ಯಂತೆ ನೀಡಿದೆ

| ಕ್ರ ಸಂ | ಮಾನ್ಯತೆ ವರ್ಷ | ಮಾನ್ಯತೆ ನೀಡಿದ ತರಗತಿ/ವಿಭಾಗಗಳು ಮತ್ತು ಮಾಧ್ಯಮ ಅಲ್ಲದೆ ಒಂದೊಂದು ಅಲ್ಪ ಮಾಧ್ಯಮದ ವಿಭಾಗ | ಶಾಲೆಯು ಯಾವ ವರ್ಗಕ್ಕೆ ಸೇರಿದೆ | ಶಾಲೆಯ ಮಾನ್ಯತೆ ಬಗ್ಗೆ ಪರಿಶೀಲಿಸಿದ ಪರಿಶೀಲನಾಧಿಕಾರಿಯವರ ಹೆಸರು |
|---|---|---|---|---|
| 01 | 2010-11 | 1ನೇ ತರಗತಿಗೆ ಪ್ರಥಮ ಮಾನ್ಯತೆ | ಸಾಮಾನ್ಯ | ವಿ. ರಾಮಪ್ಪ ಶಿಕ್ಷಣ ಸಂಯೋಜಕರು ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ಉತ್ತರ ವಲಯ-02 ಗಾಂಧಿನಗರ, ಬೆಂಗಳೂರು-09 |
| | 2011-12 | 1-2 ನೇ ತರಗತಿಗೆ ಮಾನ್ಯತೆ | | |
| | 2012-13 | 1-3 ನೇ ತರಗತಿಗೆ ಮಾನ್ಯತೆ | | |
| | 2013-14 | 1-4 ನೇ ತರಗತಿಗೆ ಮಾನ್ಯತೆ | | |
| | 2014-15 | 1-5 ನೇ ತರಗತಿಗೆ ಮಾನ್ಯತೆ | | |

ಷರತ್ತುಗಳು:

1. ಶಿಕ್ಷಣ ಕಾಯ್ದೆಯ ಎಲ್ಲಾ ನಿಯಮಗಳನ್ನು ಸರ್ಕಾರ ಹಾಗೂ ಇಲಾಖೆ ಕಾಲಕಾಲಕ್ಕೆ ನೀಡುವ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
2. ನೇಮಕಾತಿಗಳನ್ನು ಸರ್ಕಾರಿ/ಇಲಾಖಾ ನಿಯಮ ಮತ್ತು ಆದೇಶಗಳ ಪ್ರಕಾರ ಮಾಡುವುದು.
3. ಶಿಕ್ಷಕರುಗಳ ನೇಮಕಾತಿಯನ್ನು ಶಿಕ್ಷಕ/ವಿದ್ಯಾರ್ಥಿಗಳ ಅನುಪಾತ 1:40ರಂತೆ ಮಾಡಬೇಕು.
4. ಶಾಲೆ ನಡೆಸಲು ಅಗತ್ಯವಾದ ಸ್ಥಳಾವಕಾಶ ಪೀಠೋಪಕರಣ ಹಾಗೂ ಮೈದಾನ ಇವುಗಳನ್ನು ನಿಯಮಾನುಸಾರ ಒದಗಿಸಬೇಕು.
5. ಶಿಕ್ಷಣ ಕಾಯ್ದೆ ನಿಯಮದಡಿ ಹೊರಡಿಸಲಾದ ಆದೇಶದಂತೆ ಮಾತ್ರ ಶುಲ್ಕ ವಸೂಲಿ ಮಾಡುವುದು. ಇದರ ಲೆಕ್ಕಪತ್ರಗಳನ್ನು ನಿರ್ವಹಿಸುವುದು. ಹಾಗೂ ಶಾಲಾ ಸಮಯದಲ್ಲಿ ಪರಿಶೀಲನೆಗೆ ಹಾಜರು ಪಡಿಸಬೇಕು.
6. ಸೇವೆಯಲ್ಲಿರುವ ಎಲ್ಲಾ ಶಿಕ್ಷಕರ / ಸಿಬ್ಬಂದಿ ವರ್ಗದವರ ಹೆಸರಿನಲ್ಲಿ ಸೇವಾ ಪುಸ್ತಕ ತೆರೆದು ನಿರ್ವಹಿಸುವುದು.
7. ಶಾಲೆಯಲ್ಲಿ ಪಡೆಯುವ ಶುಲ್ಕದ ವಿವರಗಳ ಬಗ್ಗೆ ಪ್ರಕಟಣಾ ಫಲಕದಲ್ಲಿ ಪ್ರಕಟಿಸುವುದು.
8. ಇಲಾಖೆಯ ಪೂರ್ವಾನುಮತಿ ಪಡೆಯದೆ ಹೆಚ್ಚಿನ ತರಗತಿ ವಿಭಾಗಗಳನ್ನು ತೆರೆಯಬಾರದು.
9. ಪ್ರತಿ ವರ್ಷ ಲೆಕ್ಕಪತ್ರಗಳನ್ನು ನೋಂದಣಾಧಿಕಾರಿಗಳಿಗೆ ಸಲ್ಲಿಸಿ ಸ್ವೀಕೃತಿ ಪಡೆದು ಇಲಾಖೆಗೆ ಸಲ್ಲಿಸಬೇಕು.
10. ಇಲಾಖೆಯು ನಿಗದಿ ಪಡಿಸಿರುವ ರಾಜ್ಯ ಪಠ್ಯಕ್ರಮವನ್ನು ಅನುಸರಿಸಬೇಕು / ಬೋಧಿಸಬೇಕು.
11. ಸ್ಥಿರನಿಧಿಯನ್ನು ನಿಯಮಾನುಸಾರ (ಜಂಟಿ ಖಾತೆಯಲ್ಲಿ) ಇಟ್ಟಿರತಕ್ಕದ್ದು ಹಾಗೂ ಅವಧಿ ಮುಗಿದ ಸ್ಥಿರನಿಧಿಯನ್ನು ನವೀಕರಿಸುವುದು.
12. ಕರ್ನಾಟಕ ಶಿಕ್ಷಣ ಕಾಯ್ದೆ ನಿಯಮದಲ್ಲಿ ವಿಧಿಸಿರುವ ಮಾನ್ಯತೆಯ ಎಲ್ಲಾ ನಿಯಮಗಳನ್ನು ಪಾಲಿಸತಕ್ಕದ್ದು. ತಪ್ಪಿದಲ್ಲಿ ನಿಯಮಾನುಸಾರ ಮಾನ್ಯತೆಯನ್ನು ಹಿಂತೆಗೆದುಕೊಳ್ಳಲಾಗುವುದು.

ಕ್ಷೇತ್ರಶಿಕ್ಷಣಾಧಿಕಾರಿಗಳು
ಉತ್ತರ ವಲಯ-02
ಗಾಂಧಿನಗರ, ಬೆಂಗಳೂರು-09

ಇವರಿಗೆ:
1. ಗೌರವಪೂರ್ವಕವಾಗಿ, ಉಪನಿರ್ದೇಶಕರು, ಸಾ.ಶಿ.ಇ. [illegible] ಬೆಂಗಳೂರು
ಪ್ರತಿಯನ್ನು:
2. ಕಾರ್ಯದರ್ಶಿಗಳು/ಮುಖ್ಯ ಶಿಕ್ಷಕರು, ಯಂಗ್ ಸ್ಕಾಲರ್

Principal
Young Scholars Academ
(Affiliated to CBSE)
Site No. 1, Sy. No. 28/3, (RKB E
Nagenahalli (Near Church), R.T.
Bangalore - 560 032

CHAIRMAN
YOUNG SCHOLARS ACADEMY
Viswanatha Nagenahalli
R.T. Nagar Post, Bangalore - 560 037